

# ಫಾಲ್ಕೆ ಬೆಳಕಿನೆಡೆ ಆತ್ಮವಿಮರ್ಶಕ ರಜನಿ

■ ವಿಶಾಖ ಎನ್.

'ತನ್ನನ್ನು ತಾನೇ ಗೇಲಿಮಾಡಿಕೊಳ್ಳಬಲ್ಲ ನಟ ಸದಾ ಭೂಮಿ ಮೇಲೆ ನಿಂತಿರುತ್ತಾನೆ' ಎಂದು ಜ್ಞಾನಿಗಳು ಹೇಳುತ್ತಿರುತ್ತಾರೆ. ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯ ಹಿಂಬೆಳಕಲ್ಲಿ ರಜನೀಕಾಂತ್ ಅವರೂ ಹಾಗೆಯೇ ಕಾಣುತ್ತಾರೆ.

ದಕ್ಷಿಣ ಭಾರತದ ಕಪ್ಪು ಪ್ರತಿಭೆಗಳನ್ನು, ಕನ್ನಡದ ಮಣ್ಣಿನ ಸೊಗಡಿನ ಪ್ರತಿಭಾವಂತರನ್ನು ಬೆಳ್ಳಿಬೆಳಕಿನೆಡೆಗೆ ಎಳೆದುತಂದು ನಿಲ್ಲಿಸಿದ ಪ್ರಮುಖರಲ್ಲಿ ಕೆ. ಬಾಲಚಂದರ್ ಅವರ ಹೆಸರಿಗೆ ಅಡಿಗೆರೆ ಎಳೆಯಬೇಕು. ಅವರಿಗೆ ಫಾಲ್ಕೆ ಪ್ರಶಸ್ತಿ ಸಂದಿದ್ದಾಗ, ನಟ ಪ್ರಕಾಶ್ ರಾಜ್ ಹೇಗೆ ಅವರು ನಟರನ್ನು ತಿದ್ದಿ–ತೀಡುತ್ತಾರೆ ಎನ್ನುವುದನ್ನು ಬಣ್ಣಿಸಿದ್ದರು. ಕುಂಬಾರ ಮಡಕೆ ಮಾಡುವಾಗ ವಹಿಸುವ ಆಸ್ಥೆ, ಕೌಶಲ ಬಾಲಚಂದರ್ ಅವರಲ್ಲಿ ಇದ್ದುದನ್ನು ನೆನಪಿಸಿಕೊಂಡಿದ್ದರು. ಅದೇ ಬಾಲಚಂದರ್ ಗರಡಿಯಿಂದ ಹೊಮ್ಮಿದ ಪ್ರತಿಭೆಗಳಲ್ಲಿ ರಜನಿ ಕೂಡ ಒಬ್ಬರು.

ಒಂದಾನೊಂದು ಕಾಲದಲ್ಲಿ ಬೆಂಗಳೂರಿನಲ್ಲಿ ಬಿಟಿಎಸ್ (ಈಗಿನ ಬಿಎಂಟಿಸಿ) ಬಸ್ ಕಂಡಕ್ಟರ್ ಆಗಿದ್ದ, ದೇಸಿ ಮದ್ಯವನ್ನು ಈಗಲೂ ಗಾಜಿನ ಲೋಟಕ್ಕೆ ಬಗ್ಗಿಸಿಕೊಂಡು ಉಪ್ಪಿನಕಾಯಿ ನೆಂಚಿಕೊಂಡು ಕುಡಿಯಬಲ್ಲ ತಮ್ಮತನದ ರಜನಿ ಸೂಪರ್‌ಸ್ಟಾರ್ ಆದದ್ದು ಫ್ಯಾಂಟಸಿ ಕಥನದಂತೆ. ಬಣ್ಣವಿಲ್ಲದ ನಟ ತನ್ನ ಸ್ಟೈಲನ್ನೇ ಪ್ರಭಾವಳಿ ಮಾಡಿಕೊಂಡು ಈ ಮಟ್ಟಕ್ಕೆ ಏರುವುದು ತಮಾಷೆಯಲ್ಲ.

ರಜನಿ ಕನ್ನಡದ ಮಣ್ಣಿನವರೇ. ಕನ್ನಡ ಚಿತ್ರಗಳಲ್ಲೂ ನಟಿಸಿದವರೇ. ಈಗ ಅವರು ತಮಿಳು ಚಿತ್ರರಂಗದಲ್ಲಿ ಚಿರಸ್ಥಾಯಿ. ಹಿಂದಿ, ತೆಲುಗು, ಮಲಯಾಳಂ ಚಿತ್ರಾಭಿಮಾನಿಗಳಿಗೂ ರಜನಿ ಎಂದರೆ ಎಂತಹ ಈಡಿಯಂ ಎನ್ನುವುದು ತಿಳಿದಿದೆ. ಅವರು ಯಾವಾಗ ಅಭಿನಯಿಸಿದರು, ಅವರ ಚಿತ್ರ ಬದುಕಿನ ತಿರುವುಗಳೇನು, ಯಾವ್ಯಾವಾಗ ಎಡವಿದರು, ಯಾವಾಗೆಲ್ಲ ಗೆದ್ದರು, ಸೂಪರ್‌ಸ್ಟಾರ್ ಪ್ರಭಾವಳಿಯನ್ನು ಮುಡಿದದ್ದು ಹೇಗೆ ಎಂಬೆಲ್ಲ ಕಥನಗಳನ್ನು ಗೂಗಲ್ ಗುರು ಇಂಚಿಂಚಾಗಿ ತಿಳಿಸುತ್ತದೆ.

ಹೀಗೆಲ್ಲ ಇರುವ ರಜನಿ 'ರೋಬೊ' ಚಿತ್ರದಲ್ಲಿ ನಟಿಸುತ್ತಿರುವಾಗ ಒಮ್ಮೆ ಬೆಂಗಳೂರಿಗೆ ಬಂದಿದ್ದರು. ಅವರ ಸಹೋದರನ ಮನೆಯಲ್ಲಿ ಕೂತಿದ್ದರು. ಅಲ್ಲಿಗೆ ಸೇಟು ಒಬ್ಬರು ಬಂದರು. ಅವರು ರಜನಿಯ ಹಳೆಯ ಸ್ನೇಹಿತ. ಅವರ ಜತೆ ಮಕ್ಕಳು ಕೂಡ ಇದ್ದರು. ಆ ಸ್ನೇಹಿತ, 'ಅರೆ... ನಿನ್ನ ತಲೆಗೂದಲು ಎಲ್ಲಿ ಹೋಯಿತು' ಎಂದು ಪ್ರಶ್ನಿಸಿದ. ರಜನಿ, 'ಹೋಯ್ತುಪ್ಪ' ಎಂದರು. 'ನಿವೃತ್ತಿಯ ಜೀವನ ಹೇಗಿದೆ? ಆರಾಮಾಗಿದ್ದೀಯ' ಎಂಬ ಇನ್ನೊಂದು ಪ್ರಶ್ನೆ ಸ್ನೇಹಿತನಿಂದ. 'ಇಲ್ಲಪ್ಪ... ಹೊಸ ಸಿನಿಮಾದಲ್ಲಿ ಕೆಲಸ ಮಾಡುತ್ತಿರುವೆ' ಎಂದು ರಜನಿ ತುಸುವೂ ಬೇಸರವಿಲ್ಲದೆ ಉತ್ತರಿಸಿದರು. ಅದಕ್ಕೆ ಆ ವ್ಯಕ್ತಿ, 'ಹೀರೋಯಿನ್ ಯಾರು' ಎಂಬ ಇನ್ನೊಂದು ಪ್ರಶ್ನೆ ಹಾಕಿದರು. 'ಐಶ್ವರ್ಯಾ ರೈ' ಎಂದದ್ದೇ, 'ಹಾಗಿದ್ದರೆ ನಾಯಕ ಯಾರು' ಎಂದು ಮುಗ್ಧವಾಗಿ ಕೇಳಿದರು. ಪಕ್ಕದಲ್ಲಿದ್ದ ಆ ಸೇಟುವಿನ ಮಕ್ಕಳು ಅಪ್ಪನಿಗೆ ಸಂಜ್ಞೆ ಮಾಡಿ, ಪಕ್ಕಕ್ಕೆ ಕರೆದು ರಜನಿಯೇ ಆ ಸಿನಿಮಾದ ನಾಯಕ ಎಂದು ತಿಳಿಸಲು ಪರದಾಡುತ್ತಿದ್ದರು.

ಈ ಜೋಕನ್ನು ಖುದ್ದು ರಜನಿ ಅಮಿತಾಭ್ ಬಚ್ಚನ್ ಹಾಗೂ ಐಶ್ವರ್ಯಾ ಇದ್ದ ವೇದಿಕೆಯಲ್ಲಿ ಹೇಳಿಕೊಂಡಿದ್ದರು. ಅವರ ಬಾಡಿ ಲಾಂಗ್ವೇಜ್‌ಗೆ ಇರುವ 'ಫ್ಲೆಕ್ಸಿಬಿಲಿಟಿ' ಮನಸ್ಸಿಗೂ ಇದೆಯೆನ್ನುವುದಕ್ಕೆ ಇದೇ ಸಾಕ್ಷಿ.

ಇಪ್ಪತ್ತರ ವಯಸ್ಸಿನಲ್ಲಿ ಸಿನಿಮಾಗೆ ಕೊರಳೊಡ್ಡಿಕೊಂಡು, ರಾಜಕೀಯ ಪಡಸಾಲೆಯ ಮೇಲೆ ನೆರಳೂ ಬೀಳುವಂತೆ ನೋಡಿಕೊಳ್ಳುತ್ತಿರುವ ರಜನಿ ಅವರಿಗೆ ಫಾಲ್ಕೆ ಪ್ರಶಸ್ತಿ ಸಂದಿರುವುದು ಜನಪ್ರಿಯ ಚಿತ್ರರಂಗದ ಎಷ್ಟೋ ಪ್ರತಿಭೆಗಳ ಕರತಾಡನಕ್ಕೆ ತಕ್ಕುದಂತೂ ಹೌದು.

ರಜನಿಗಂಧ ಕನ್ನಡದ ಮಣ್ಣಿನಿಂದ ರೂಪುಗೊಂಡು ತಮಿಳುಮಾನಸವನ್ನು ಆವರಿಸಿಕೊಂಡಿರುವ ಅನನ್ಯ ಪ್ರತಿಭೆ. ಬೇರಿನ ಸಂಬಂಧದಿಂದಾಗಿ ಅವರಿಗೆ ಸಂದಿರುವ 'ಫಾಲ್ಕೆ ಗೌರವ' ಕನ್ನಡಿಗರ ಸಂಭ್ರಮವೂ ಹೌದು. ■